# Participated in RGUHS Kalburgi Zone Table tennis Tournament held at Ayurvedic Medical College, Ilkal on 24th August-2023.

**Secured 1st Place in Men Section.**

**Secured 2nd Place in Women Section.**










5 ಶನಿವಾರ 26, ಆಗಸ್ಟ್, 2023

ಕ್ರಾಂತಿ ಧ್ವನಿ
ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

## ಪುರಷರ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಎಸ್.ಎನ್. ವೈದ್ಯಕೀಯ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ

ಇಳಕಲ್ : ಸ್ಥಳಿಯ ಮಹಾಂತ ಗಂಗೋತ್ರಿ ಆವರಣದಲ್ಲಿ ರಾಜೀವ್ ಗಾಂಧಿ ವಿಶ್ವ ವಿದ್ಯಾಲಯ ಬೆಂಗಳೂರ ಹಾಗೂ ಎಸ್.ವ್ಹಿ.ಎಮ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಇಳಕಲ್ ದಲ್ಲಿ ಸಹಯೋಗದೊಂದಿಗೆ ಜರುಗಿದ ಕಲಬುರ್ಗಿ ವಲಯದ ಪುರುಷರ ಹಾಗೂ ಮಹಿಳಾ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಒಟ್ಟು ಒಂಭತ್ತು ತಂಡಗಳು ಭಾಗವಹಿಸಿದ್ದವು.

ಪುರಷರ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಬಾಗಲಕೋಟೆಯ ಎಸ್.ಎನ್ ವೈದ್ಯಕೀಯ ಮಹಾವಿದ್ಯಾಲಯ, ದ್ವಿತೀಯ ಸ್ಥಾನವನ್ನು ಬೀದರ ವೈದ್ಯಕೀಯ ಮಹಾವಿದ್ಯಾಲಯ ಬೀದರ ಹಾಗೂ ಮಹಿಳಾ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು, ಕಲಬುರ್ಗಿಯ ಎಮ್. ಆರ್. ವೈದ್ಯಕೀಯ ಮಹಾವಿದ್ಯಾಲಯ, ದ್ವಿತಿಯ ಸ್ಥಾನವನ್ನು ಬಾಗಲಕೋಟೆಯ ಎಸ್.ಎನ್. ವೈದ್ಯಕೀಯ ಮಹಾವಿದ್ಯಾಲಯ ತಂಡದವರು ಗೆದ್ದು ವಿಜಯೋತ್ಸವನ್ನು ಆಚರಿಸಿದರು.

ಈ ಸಮಾರಂಭದಲ್ಲಿ ಮುಖ್ಯ




ಅತಿಥಿಗಳಾಗಿ ನಿವೃತ್ತ ಪ್ರಾಧ್ಯಾಪಕ ಶಿವಾನಂದ ಮುಚಖಂಡಿ ಆಗಮಿಸಿ ಇಳಕಲ್ ನಗರದ ವಿವಿಧ ಅಂಗ ಸಂಸ್ಥೆಗಳಲ್ಲಿ ಸುಮಾರು 62 ವರ್ಷಗಳಿಂದ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಹಲವಾರು ವಿದ್ಯಾರ್ಥಿಗಳು ಬ್ಲ್ಲ ಕ್ರೀಡಾಪಟುಗಳಾಗಿದ್ದಾರೆ ಹಾಗೂ ಈಗಿನ ಕ್ರೀಡಾಪಟುಗಳಿಗೆ ದೈಹಿಕ ಆರೋಗ್ಯದ ಸಂರಕ್ಷಣೆಗೆ ಹೆಚ್ಚಿನ ಗಮನ ನೀಡಬೇಕೆಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಆಯುರ್ವೇದ ಮಹಾವಿದ್ಯಾಲಯದ ಚೇರಮನ್ ಎಮ್.ಜಿ.ಪಟ್ಟಣಶೆಟ್ಟರ ಪ್ರಾ, ಡಾ॥ ಕೆ.ಸಿ.ದಾಸ್, ಉಪ ಪ್ರಾ, ಹಾಗೂ ಸಿನೇಟ್ ಸದಸ್ಯ ಡಾ॥ಪ್ರಕಾಶ್. ಎಸ್. ತಾರಿವಾಳ, ಕಲಬುರ್ಗಿ ವಲಯದ ಸಂಯೋಜಕ ನೇತಾರ ಉಪಸ್ಥಿತರಿದ್ದರು, ದೈಹಿಕ ನಿರ್ದೇಶಕ ಡಾ.ಜಗದೀಶ್ ಹೊಲಗೇರಿ ಸ್ವಾಗತಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಕಾಲೇಜಿನ ದೈಹಿಕ ಶಿಕ್ಷಕರು, ವಿದ್ಯಾರ್ಥಿ - ವಿದ್ಯಾರ್ಥಿನಿಯರು, ಶಿಕ್ಷಕ - ಶಿಕ್ಷಕೇತರ ವೃಂದವರು ಉಪಸ್ಥಿತರಿದ್ದು ಪಂದ್ಯದಲ್ಲಿ ಪಾಲ್ಗೊಂಡ ವಿದ್ಯಾರ್ಥಿ - ವಿದ್ಯಾರ್ಥಿನಿಯರು ತಮ್ಮ ಅನಿಸಿಕೆಗಳನ್ನು ಹೇಳುತ್ತಾ ಪಂದ್ಯಾವಳಿಯ ಆಯೋಜನೆ, ವಸತಿ, ಬೋಜನ ಇತರೆ ಎಲ್ಲಾ ವ್ಯವಸ್ಥೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ॥ ಸುಪ್ರಿಯಾ ಬೋಸಲೆ ಹಾಗೂ ಡಾ॥ ಚಂದ್ರ ಕಾಂತ್ ಬುದ್ನಿಯವರು ನಿರೂಪಿಸಿದರು ಹಾಗೂ ಡಾ॥ ಸಿದ್ಧಲಿಂಗಮೂರ್ತಿ ವಂದಿಸಿದರು.